**ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.**

ಸಿ.ಸಿ. ನಂಬರ 12/2020

ಸಿಡಬ್ಲ್ಯೂ- 4/ ಪಿಡಬ್ಲ್ಯೂ-2.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕಲ್ಲಪ್ಪ |
| ತಂದೆಯ ಹೆಸರು | ಃ | ದುರ್ಗಪ್ಪ ತಳವಾರ |
| ವಯಸ್ಸು | ಃ | 38 ವರ್ಷ |
| ವೃತ್ತಿ | ಃ | ಕೂಲಿ |
| ವಾಸ್ತವ್ಯ | ಃ | ಅಗಡಿ , ಮುಂಡಗೋಡ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 25-09-2023.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಪೊಲೀಸರು ಅಪಘಾತವಾಗಿದ್ದಾಗ ಇಂದೂರಿನ ಕ್ಯಾಂಪಿನ ಹತ್ತಿರ ಧರ್ಮಣ್ಣ ಎಂಬುವವರ ಮನೆ ಮತ್ತು ಹೊಲದ ಹತ್ತಿರ ಆರೋಪಿ ಜೊತೆ ಇದ್ದ ಅವರ ಪತ್ನಿಯ ತಂಗಿಯನ್ನು ಆ್ಯಂಬುಲೆನ್ಸಿಗೆ ನಾನು ಮತ್ತು ಕೆಲವು ಜನ ಹಾಕಿರುತ್ತೇವೆ . ಆಗ ಆರೋಪಿ ತಪ್ಪಿಸಿಕೊಂಡಿರುತ್ತಾನೆ. ಪೊಲೀಸರು ಸ್ಥಳದಲ್ಲಿ ಆಗ ಪಂಚನಾಮೆ ಮಾಡಿರುತ್ತಾರೆ. ಆಗ ಸ್ಥಳದಲ್ಲಿ ಚಾಸಾ 5 ರವರು ಹಾಜರಿದ್ದರು. ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಆಗ ಸಮಯ ರಾತ್ರಿ 10-00 ಗಂಟೆಯಿಂದ 11-30 ಯವರೆಗೆ ಪೊಲೀಸರು ಮಹಜರು ಮಾಡಿದರು . ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ , ಅದು ಮಹಜರ್ ಆಗಿದ್ದು , ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ . ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯ್ನು ನಿಪಿ1(ಬಿ) ಎಂದು ಗುರುತಿಸಲಾಯಿತು.

(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.**

ದಿಃ 16-03-2019 ರಂದು ಪೊಲೀಸರು ಮಹಜರು ಮಾಡಿರುತ್ತಾರೆ ಎಂದರೆ ಸರಿ. ಆಗ ಪೊಲೀಸರಿಗೆ ಚಾಸಾ 8 ರವರು ಸ್ಥಳ ತೋರಿಸಿದರು ಎಂದರೆ ಗೊತ್ತಿಲ್ಲ. ಪಂಚನಾಮೆಯನ್ನು ಸಾಯಂಕಾಲ 4-00 ಗಂಟೆಯಿಂದ 5-00 ಗಂಟೆ ವರೆಗೆ ಮಾಡಿದರು ಎಂದರೆ ಸರಿಯಲ್ಲ. ಆಗ ಪೊಲೀಸರು ಪಂಚನಾಮೆ ಮಾಡಿದಾಗ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಪೊಲೀಸರು ಸ್ಥಳದಲ್ಲಿ ಕಚ್ಚಾ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಪೊಲೀಸರು ಸಾಯಂಕಾಲ ಮಹಜರು ಮಾಡಿ ,

ಫೋಟೋ ತೆಗೆದು, ಕಚ್ಚಾ ನಕಾಶೆ ತಯಾರಿಸಿದ್ದರೂ ಸಹ ಆರೋಪಿ ನಮ್ಮ ಊರಿನವನಾಗಿದ್ದರಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿರುವುದರಿಂದ ಮುಂದೂಡಲಾಯಿತು. ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

–sd –

ಪ್ರ.ದ.ನ್ಯಾ.ದಂ. ಮುಂಡಗೋಡ.